ಸಂಗೊಳ್ಳಿ ಹಾಗೂ ದೊಡವಾಡ ಗ್ರಾಮಗಳಲ್ಲಿ 33 ಕೆ.ವಿ. ಸ್ಟೇಷನ್ ಪ್ರಾರಂಭಿಸುವ ಬಗ್ಗೆ

2602(3430) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿ ಹಾಗೂ ದೊಡವಾಡ ಗ್ರಾಮಗಳಲ್ಲಿ 33 ಕೆ.ವಿ. ಸ್ಟೇಷನ್ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ;

ಆ) ಈ ಹೊಸ ಕೆ.ವಿ. ಸ್ಟೇಷನ್‌ಗಳ ಕಾಮಗಾರಿ ಯಾವ ಹಂತದಲ್ಲಿರುತ್ತದೆ?

ಶ್ರೀ ಬಸವರಾಜ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿ ಗ್ರಾಮದಲ್ಲಿ 33 ಕೆ.ವಿ. ವಿದ್ಯುತ್ ಉಪ ಕೇಂದ್ರದ ಸ್ಥಾಪನೆಯ ಪ್ರಸ್ತಾವನೆಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ತಾಂತ್ರಿಕ ಸಮಿತಿಯು ಅಕ್ಟೋಬರ್–2000ದಲ್ಲಿ ಅನುಮೋದನೆ ನೀಡಿರುತ್ತದೆ.

ದೊಡ್ಡವಾಡದಲ್ಲಿ 33 ಕೆ.ವಿ ವಿದ್ಯುತ್ ಉಪಕೇಂದ್ರದ ಸ್ಥಾಪನೆ ಬಗ್ಗೆ ಪ್ರಸ್ತಾವನೆ ಇರುವುದಿಲ್ಲ.

ಆ) ಸಂಗೊಳ್ಳಿ ಗ್ರಾಮದಲ್ಲಿ 2x5 ಎಂ.ವಿ.ಎ. 33/11 ಕೆ.ವಿ. ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವ ಕಾರ್ಯವನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದಿಂದ ನೇಮಕಗೊಂಡಿದ್ದ ಕನ್‌ಸಲ್ಟೆಂಟ್ ಆದ ಪಿ.ಆರ್.ಡಿ.ಸಿ.ಎಲ್. ವರದಿ ಪ್ರಕಾರ 2005–06 ರಲ್ಲಿ ಕೈಗೆತ್ತಿಕೊಳ್ಳಲಾಗುವುದು.

ದೊಡ್ಡವಾಡದಲ್ಲಿ 33 ಕೆ.ವಿ. ವಿದ್ಯುತ್ ಉಪಕೇಂದ್ರದ ಸ್ಥಾಪನೆ ಬಗ್ಗೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಬೆಂಗಳೂರು ನಗರದ ನಗರಸಭೆಗಳಲ್ಲಿನ ಅವ್ಯವಹಾರದ ತನಿಖೆ

2603(2998) ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರದ ಸುತ್ತಮುತ್ತಲಿನ ಯಾವ ಯಾವ ನಗರಸಭೆಗಳಲ್ಲಿ ನಡೆದ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಅಮಾನತ್ತುಗೊಂಡಿದ್ದ ಅಧಿಕಾರಿಗಳು ಪುನರ್ ನೇಮಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದರೆ, ಇಂತಹ ಪ್ರಕರಣಗಳಲ್ಲಿ ಸರ್ಕಾರದವರು ಯಾವ ನೀತಿ ನಿರೂಪಣೆ ಕ್ರಮವನ್ನು ಕೈಗೊಂಡಿದೆ;

ಆ) ಈ ನಗರಸಭೆಗಳಲ್ಲಿನ ಅವ್ಯವಹಾರದಲ್ಲಿ ಭಾಗಿಯಾದ ಅಧಿಕಾರಿಗಳ ಸಿಬ್ಬಂದಿಗಳ ಪ್ರತ್ಯೇಕ ವಿವರ ನೀಡುವುದು;

ಇ) ಇವರ ವಿರುದ್ಧದ ತನಿಖೆಯು ಯಾವ ಹಂತದಲ್ಲಿದೆ;

ಈ) ಯಾವ ಯಾವ ಅಧಿಕಾರಿಗಳ ಮೇಲೆ ಲೋಕಾಯುಕ್ತರ ತನಿಖೆ ಮುಗಿದು ವರದಿ ಸಲ್ಲಿಸಿದ್ದಾರೆ; ಸರ್ಕಾರವು ಈ ವರದಿಯ ಮೇಲೆ ಯಾವ ಕ್ರಮವನ್ನು ಕೈಗೊಂಡಿದೆ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಹೌದು, ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಡಿಪಿಎಆರ್ 13 ಎಸ್‌ಡಿಇ 85 ದಿನಾಂಕ: 3–7–1985 ರಲ್ಲಿನ ಸೂಚನೆಗಳಂತೆ ಅಮಾನತ್ತಿನಲ್ಲಿಟ್ಟ 6 ತಿಂಗಳ ನಂತರವೂ ಸರ್ಕಾರಿ ನೌಕರನ ವಿರುದ್ಧ ತನಿಖೆ ಮುಕ್ತಾಯಗೊಳ್ಳದಿದ್ದಲ್ಲಿ ಅವನ ಅಮಾನತ್ತನ್ನು ರದ್ದು ಪಡಿಸಿ ಸೇವೆಗೆ ಹಿಂತೆಗೆದುಕೊಳ್ಳಲು ಅವಕಾಶವಿರುತ್ತದೆ. ಈ ಅಧಿಕಾರಿಗಳು ಸುಮಾರು 11 ತಿಂಗಳುಗಳಿಗೂ ಹೆಚ್ಚು

ಕಾಲ ಅಮಾನತ್ತಿನಲ್ಲಿದ್ದ ಕಾರಣ ಈ ಅಧಿಕಾರಿಗಳ ಪ್ರಕರಣಗಳನ್ನು ಪರಾಮರ್ಶಿಸಿ ಮತ್ತೆ ಸೇವೆಗೆ ಹಿಂತೆಗೆದುಕೊಳ್ಳಲಾಗಿದೆ.

ಆ) ಮಾನ್ಯ ಲೋಕಾಯುಕ್ತರವರು ಸರ್ಕಾರಕ್ಕೆ ಇದುವರೆವಿಗೂ ತನಿಖಾ ವರದಿ ಸಲ್ಲಿಸಿಲ್ಲವಾದ್ದರಿಂದ ಈ ಅವ್ಯವಹಾರದಲ್ಲಿ ಭಾಗಿಯಾದ ಅಧಿಕಾರಿಗಳ ಸಿಬ್ಬಂದಿಗಳ ವಿವರ ಲಭ್ಯವಿರುವುದಿಲ್ಲ.

ಇ) ತನಿಖೆಯು ಲೋಕಾಯುಕ್ತದಲ್ಲಿ ಬಾಕಿಯಲ್ಲಿರುತ್ತದೆ.

ಈ) ಮಾನ್ಯ ಲೋಕಾಯುಕ್ತರವರು ಇದುವರೆವಿಗೂ ಯಾವ ಅಧಿಕಾರಿಯ ವಿರುದ್ಧವೂ ಸರ್ಕಾರಕ್ಕೆ ವರದಿ ಸಲ್ಲಿಸಿರುವುದಿಲ್ಲ. ವರದಿ ಬಂದ ನಂತರ ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿನ ಗ್ರಾಮಾಂತರ ಪ್ರದೇಶಗಳಲ್ಲಿನ ವಿದ್ಯುತ್ ವ್ಯತ್ಯಯ

2604(2999) ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಬೆಂಗಳೂರು ಮಹಾನಗರ ಪಾಲಿಕೆ, ನಗರ ಪ್ರದೇಶಗಳು ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಎಷ್ಟು ಗಂಟೆಗಳ ಕಾಲ ವಿದ್ಯುತ್‌ನ್ನು ನೀಡಲಾಗುತ್ತಿದೆ; ಹಾಗೂ ಇದರಲ್ಲಿ ಸಿಂಗಲ್ ಮತ್ತು ಥ್ರೀ ಫೇಸ್ ವಿದ್ಯುತ್ ಸರಬರಾಜಿನ ವಿವರ ನೀಡುವುದು;

ಆ) ಆಯವ್ಯಯ ಭಾಷಣದಲ್ಲಿ ಸರ್ಕಾರವು ತಿಳಿಸಿದಂತೆ ಗ್ರಾಮಾಂತರ ಪ್ರದೇಶಗಳಿಗೆ 17 ಗಂಟೆಗಳ ಕಾಲ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆಯೇ;

ಇ) ಅಸಮರ್ಪಕ ವಿದ್ಯುತ್ ಪೂರೈಕೆಯಿಂದ ಗ್ರಾಮಾಂತರ ಪ್ರದೇಶದ ರೈತರು ಪಡುತ್ತಿರುವ ಬವಣೆ ಹಾಗೂ ಕೃಷಿ ಚಟುವಟಿಕೆಗಳೇ ನಿಲ್ಲುವಂತಹ ಪರಿಸ್ಥಿತಿ ನಿರ್ಮಾಣವಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರವು ಸಮಸ್ಯೆ ನಿವಾರಣೆಗೆ ಯಾವ ಕ್ರಮ ಕೈಗೊಂಡಿದೆ?

ಶ್ರೀ ಬಸವರಾಜ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ದಿನದ 24 ಗಂಟೆಗಳ ಕಾಲ ವಿದ್ಯುತ್ ಸರಬರಾಜನ್ನು ಮಾಡಲಾಗುತ್ತಿದೆ. ಉಳಿದ ನಗರಗಳ ವ್ಯಾಪ್ತಿಯಲ್ಲಿ – 24 ಗಂಟೆಗಳ ವಿದ್ಯುತ್ತನ್ನು ನೀಡಲಾಗುತ್ತಿದ್ದರೂ. ಕೆಲವು ಪ್ರದೇಶಗಳಲ್ಲಿ ಅನಿವಾರ್ಯ ಪರಿಸ್ಥಿತಿಗಳಲ್ಲಿ ವಿದ್ಯುತ್ ಕಡಿತ ಇರುತ್ತದೆ.

ಗ್ರಾಮಾಂತರ ಪ್ರದೇಶದಲ್ಲಿ ದಿನಾಂಕ 19–6–2003 ರಿಂದ ಒಟ್ಟು 13 1/2 ಗಂಟೆಗಳ ಕಾಲ ವಿದ್ಯುತ್ ನೀಡಲಾಗುತ್ತಿದೆ. ಇದರಲ್ಲಿ 9 1/2 ಗಂಟೆಗಳ ಕಾಲ 3 ಫೇಸ್ ವಿದ್ಯುತ್ ಮತ್ತು 4 ಗಂಟೆಗಳ ಕಾಲ ಸಿಂಗಲ್ ಫೇಸ್ ವಿದ್ಯುತ್ ನೀಡಲಾಗುತ್ತಿದೆ.

ಆ) ಬರದ ಕಾರಣದಿಂದಾಗಿ ವಿದ್ಯುತ್ ಲಭ್ಯತೆಯಲ್ಲಿ ಕೊರತೆಯುಂಟಾಗಿರುವುದರಿಂದ 17 ಗಂಟೆಗಳ ಕಾಲ ಸಂಪೂರ್ಣವಾಗಿ ವಿದ್ಯುತ್ ಸರಬರಾಜು ಮಾಡಲು ಆಗಿರುವುದಿಲ್ಲ.

ಇ) ಮುಂಗಾರು ಪ್ರಾರಂಭವಾಗಿರುವುದು ವಿಳಂಬವಾದ್ದರಿಂದ ಜಲ ವಿದ್ಯುತ್‌ನ ಲಭ್ಯತೆಯಲ್ಲಿ ಅಧಿಕ ಕೊರತೆ ಉಂಟಾದ್ದರಿಂದ ನಗರ ಪ್ರದೇಶಗಳಲ್ಲಿ ಲೋಡ್ ಶೆಡ್ಡಿಂಗ್ ನಿರ್ವಹಣೆಯೂ ಸೇರಿದಂತೆ ಗ್ರಾಮಾಂತರ ಪ್ರದೇಶದಲ್ಲಿ 4 ಗಂಟೆಗಳ ಅವಧಿಯ 3 ಫೇಸ್ ವಿದ್ಯುತ್ ಸರಬರಾಜು ಹಾಗೂ 3 ಗಂಟೆಗಳ ಅವಧಿಯ ಸಿಂಗಲ್ ಫೇಸ್ ವಿದ್ಯುತ್ ಸರಬರಾಜು ವ್ಯವಸ್ಥೆ ಮಾಡುವುದು